doc-140
T-P-2

SATYAVADI Founded 1917 Regd. No. M. 1299

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 148 | ಬುಧವಾರ 13-2-46 | ಬಿಡಿ ಪ್ರತಿ 3 ಪೈ

## ವಿವಿಧ ವಿನೋದಾವಳಿಗಳ ಅವಾಂತರ

ಈಚೀಚೆಗೆ ನಮ್ಮ ಸಂಸ್ಥಾನದಲ್ಲಿ ವಿವಿಧ ವಿನೋದಾವಳಿಗಳು ಹೆಚ್ಚುತ್ತಿವೆ. ಇಷ್ಟೇ ಒದಿಕೊಂಡರೆ ವಾಸ್ತವಿಗೆ ಸಂತೋಷವೇನೋ ಆಗುತ್ತೆ. ನಮ್ಮ ನಾಡಿನ ಜನ ಕಲಾರಾಧನೆಯಲ್ಲಿ ಛಟ್ಟಿಗರಾಗುತ್ತಿದ್ದಾರೆ ಎಂಬ ಭಾವನೆ ಬರುತ್ತದೆ. ಅದೇ ಸಂತೋಷ ಹುಟ್ಟಿಸುವುದು. ಆ ವಿನೋದಾವಳಿಗಳೆನ್ನು ಕಣ್ಣಾರೆ ನೋಡಿ, ಕಿವಿಯಾರೆ ಆಲಿಸಿದರೆ, ತುಂಬಾ ದುಃಖವಾಗುತ್ತೆ. ಏಕೆಂದರೆ ವ್ಯವಸ್ಥೆ ಹುದ್ದ ಅವ್ಯವಸ್ಥೆ. ಮೊಟ್ಟ ಮೊದಲು 'ಷೋ' 'ಗ್ಯಾಪ್ಸ್' ಮಯು ಎರಡನೇದು 'ಮೇಕಪ್' 'ಸ್ಟೇಜ್ ಅರೆಂಜ್‌ಮೆಂಟ್' ಇತ್ಯಾದಿಗಳನ್ನು ಅವಸರ ಅನಸರದಲ್ಲಿ ಗೃಗೆ ಸಿಕ್ಕಿದಷ್ಟರಲ್ಲೇ ಸರಿಪಡಿಸಿಕೊಂಡು ಉತ್ತಮ ಕಂಠ ಸ್ವರೂಪ ತೋರಿಸುವುದೆಂದು ಹೊಂಟು ಕಲೆಯನ್ನು ಕೊಲೆಯೂಗುತ್ತಿದೆ.

ಈ ರೀತಿ ಇದರ ಮೇಲೆ ಉಪನ್ಯಾಸ ಈಗ ಬೇಡ. ಒಂದು ಉದಾಹರಣೆ ಸಾಕು. ಹಿಂದೆ ನಡೆದ ಪ್ರದರ್ಶನವೊಂದನ್ನು ಜ್ಞಾಪಿಸಿಕೊಳ್ಳುವುದಕ್ಕಿಂತ ನೆನ್ನೆಯ ಪ್ರದರ್ಶನ ಇನ್ನೂ ನಮ್ಮ ಸ್ಮೃತಿ ಪಥದಿಂದ ಇಂಗಿಲ್ಲವಾಗಿ ಅದನ್ನೇ ಉದಾಹರಣೆಗೆ ತೆಗೆದುಕೊಳ್ಳಬಹುದು. ನಿನ್ನೆ ನೂರಾರು ಚಿಕ್ಕ ಚಿಕ್ಕ ನಾಟಿಕಗಳೂ, ನಾಲ್ಕು ಡ್ಯಾನ್ಸುಗಳೂ ಎರಡು ಸಂಗೀತಗಳೂ ಆದವು ಮೊದಲನೇ ನಾಟಕ 'ಹೇಕಲಾಟ' ಹೆಸರಿಗೂ ನಾಟಕ ವಸ್ತುವಿಗೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ ಯಾರೋ ಶಾಸ್ತ್ರಿ ಹಿಬ್ಬ ಹುಡುಗನ್ನ ಒಬ್ಬ ಹುಡುಗಿಗೆ ತಂದು ಗಂಟ್ಹಾಕ್ತಾನೆ ಅಷ್ಟೇ ವಸ್ತು ಇದನ್ನು ಬೆಳೆಸಿರುವ ವಿಧಾನ ನೀರಸವಾಗಿದೆ. ಪಾತ್ರಧಾರಿಗಳ ಧ್ವನಿ ಎರಡೂ ಪಾಯಿಂ ಕ್ಲಾಸಿನಿಂದ ಮುಂದಕ್ಕೆ ಹೋಗುತ್ತಿರಲಿಲ್ಲ ಅಲ್ಲಿ ಒಂದು ಸಾಧಾರಣ ಮನೆ ದೃಶ್ಯ ಜಮಿಾನ್ದಾರನ ಬಂಗ್ಲೆ ಡಾಕ್ಟರ್ ಇವರು ಈ ದೃಶ್ಯಗಳು ಬರಬೇಕಾಗಿತ್ತು. ಅದೆಲ್ಲವಕ್ಕೂ ಒಂದೇ ಸೀನು; ಒಂದೇ ಟೇಬಲ್ಲು; ಅದೇ ಟೇಬಲ್ಲು ಕ್ಲಾತು! ಇಷ್ಟೆ ಸಾಕು ಆ ನಾಟಕದ ವಿಚಾರ ಎರಡನೇದು ಭಾಯಾ ಕಲಾವಿದರ ಅನುಕೂಲಕ್ಕೆಷ್ಟಬ್ಬಣ್ಣ ಪ್ರದರ್ಶನ ಇನ್ನೂ ಎಳಸು ಪ್ರಕಾರ ಒಬ್ಬರೂ ಸ್ಟೇಜ್ ವಾಯ್ಸ್ ಅಲ್ಲ ಅವತಾಡುತ್ತಿದ್ದ ಪಾತ್ರ ಸೈಡ್ ವಿಂಗ್ಸ್ ನಲ್ಲಿದ್ದವರಿಗೇ ಕೇಳುತ್ತಿತ್ತೋ, ಇಲ್ಲವೋ? ಅನುಮಾನ! ಮೇಕಪ್ ಜನ್ನಾ ಇತ್ತು! ಆದರೆ ಕಪ್ಪಣ್ಣ ಪ್ರಥಮದಲ್ಲೇ ಕೆಲವರಿಗೆ ಮತ್ತು ಸಂಜೆ ಉಟ್ಟೈಂಡು ಮಂದಿನ ರಂಧೋಲ್ ರಂಗಣ್ಣನ ಮೇಕಪ್ಪಿಗೆ ಅನುಕೂಲ ಮಾಡಿಕೊಂಡದ್ದುದ್ದು ಸನ್ನಿವೇಶಕ್ಕೆ ಅಸಂಬದ್ಧವಾಗಿತ್ತು. ರಂದ್ರು ಮೈಮೇಲೆ ವಿಭೂತಿ ಪಟ್ಟೆಗಳು ಅತಿಯಾಗಿದ್ದವು ಯಾಕೂಬ್ ಕೇವಲ ಬಡಕಲ ಗಾಡಿ ಸಾರಥಿ ಅವನ ಉಡುಪು ಮಾತ್ರ ರಂಧೋಲ್ ರಂಗಣ್ಣನ ಜೊಡು ಕುದುರೆ ಸಾರೋಟಿನ ಸಾರಥಿ ತರಹ ಇತ್ತು ಇನ್ನು ಕಿಸಾ ಗೌತಮಿ ವಿಚಾರ ಬುದ್ಧ! ಎಲೇ ಬುದ್ಧ!! ಕಿಸಾ ಗೌತಮಿ ಜಿನ್ನು ಗೂನಿತ್ತು ಕಂಠ ಗಂಡು ಕಂಠ ಮೇಕಪ್‌ಮಲಿನ ಉಳಿದ ವಿಷಯಕ್ಕೆ ಈ ಲೇಖನದಲ್ಲಿ ಎಡೆಯಿಲ್ಲ ಒಟ್ಟನಲ್ಲಿ ಇದು ವಿವಿಧ ಕೊರತೆಯ ಧಾವಳಿಯೋ? ವಿನೋದದ ಹಾವಳಿಯೋ ಆಗಿತ್ತೆ ಹೊರತು ಕಲಾದೃಷ್ಟಿಯಿಂದ ಸೊನ್ನೆ ಇವೆಲ್ಲಾ ನಿನ್ನೆ ರಂಗಾಚಾರ್ಲು ಪುರಭವನದಲ್ಲಿ ನಡೆಯಿತ ಇಂಥಾ ವಿಪರ್ಯಾಸಗಳ ವ್ಯವಸ್ಥಾಕಾರ್ಯ ಇನ್ನು ಮುಂದಾದರೂ ಉಚ್ಚಾಟನೆಗಾಗಿ ನಡೆಯಲಿ ವ್ಯವಸ್ಥಾಪಕರಿಗೆ ನಾಲ್ಕು ನಿಟ್ಟಿನ ನೋಟವಿರಲಿ ಎಲ್ಲರೂ ಎಲ್ಲಾ ವಿಧದಲ್ಲೂ ಪ್ರಗತಿಗೊಳ್ಳಲಿ ಇಷ್ಟೆ ನಮ್ಮ ಹಾರೈಕೆ. ಈ ಅವಾಂತರಗಳು ತಪ್ಪುವುದೆಂದು?

ವಿನೋದ್

## ಕಲ್ಕತ್ತಾದಲ್ಲಿ ಗೋಲೀಬಾರು

ಕಲ್ಕತ್ತಾ ಫೆ, 12— ಐ. ಎನ್. ಎ. ಕ್ಯಾ॥ ಅಬ್ದುಲ್ ರಷೀದಿಗೆ ವಿಧಿಸಿರುವ ಶಿಕ್ಷೆಯನ್ನು ಪ್ರತಿಭಟಿಸಲು ನಡೆದ ಮೆರವಣಿಗೆ ಏರ್ಪಾಡನ್ನು ತಡೆಯಲು ಪೋಲೀಸಿನವರೂ ಗುಂಡು ಹಾರಿಸಿದರು.

# ರಾಷ್ಟ್ರೀಯ ಸರಕಾರವೇ ಮದ್ದು!

## ಗಾಂಧೀಜಿಯವರ ಸಲಹೆ

ವಾರ್ಧಾಗುಜ್ ಫೆ 12— ದೇಶದ ಆಹಾರ ದುಸ್ಥಿತಿಯನ್ನು ನಿವಾರಿಸಲು ರಾಷ್ಟ್ರೀಯ ಸರಕಾರ ಸ್ಥಾಪನೆಯೇ ಸಮಯಾದ ಮದ್ದು ಎಂದು ಗಾಂಧೀಜಿಯವರ ಸಲಹೆಯಾಗಿದೆ.

## ಐ. ಎನ್. ಎ. ಜನರನ್ನು ಬಿಡಿ

ನವ ದೆಹಲಿ ಫೆ, 11—ಎಲ್ಲಾ ಐ ಎನ್. ಎ. ಜನರನ್ನು ಬಿಟ್ಟು ಬಿಡಬೇಕೆಂದು ಕೇಂದ್ರ ಅಸೆಂಬ್ಲಿಯು ಒತ್ತಾಯ ಪಡಿಸಲಾಯಿತು. ಈ ಸಂಬಂಧದಲ್ಲಿ ನ ಸಂಕಾರದ ನೀತಿಯು ಖಂಡಿಸಲಾಯಿತು.

## ಪ್ರೈ॥ ಟ್ರೂಮನ್

ಚಿಕಾಗೋ ಫೆ, 11—ಪ್ರೈ॥ ಟ್ರೂಮನ್ನರು 1948 ರ ಅಧ್ಯಕ್ಷ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲುವುದಿಲ್ಲವೆಂದು ಹೇಳಲ್ಪಟ್ಟಿದೆ.

## ನೋಟುಗಳ ಪ್ರಕರಣ

ನವ ದೆಹಲಿ ಫೆ. 12 ಜನವರಿ 11 ರಲ್ಲಿ 143,97, 0,000 ರೂಗಳ ಹೆಚ್ಚು ಮೌಲ್ಯದ ನೋಟುಗಳು ಚುನಾವಣೆಯಲ್ಲಿದ್ದವೆಂದೂ ಜನವರಿ 12 ರಿಂದ 26 ರವರೆಗೆ ರಿಜರ್ವ್ ಬ್ಯಾಂಕು ಮತ್ತು ಷೆಡ್ಯುಲ್ಡ್ ಬ್ಯಾಂಕುಗಳ ಮೂಲಿಕ 101,70, 20 500, ರೂಗಳ ಹೆಚ್ಚು ಮೌಲ್ಯದ ನೋಟುಗಳು ಒದಲಾಯಿಸಿತೆಂದೂ ಅ ಸಂಖ್ಯೆಯಲ್ಲಿ ಫೈ ನಾನ್ಸ್ನು ಮೆ ಒಬ್ಬರು ತಿಳಿಸಿದರು.

## ರೇಷ್ಮೆ ಖೋತಾದಿಂದ ಲಾಭ

ಮದರಾಸು ಫೆ, 12—ರೇಷ್ಮೆನ್ನಿನಲ್ಲಿ ಶೇಕಡಾ 25 ಖೋತಾ ಮಾಡಿದ್ದರೆ 25 ಲಕ್ಷ ಟನ್ ಆಹಾರ ಉಳಿತಾಯವಾಗುವುದೆಂದು ಹೇಳಲಾಗಿದೆ.

## ವಿವಿಧ ವರ್ತಮಾನ

ಡಬ್ಲಿನ್ ಫೆ, 11—ನ್ಯೂಸೂರು ಕಾಂಗ್ರೆಸ್ ಪ್ರಮುಖಂಡರಾದ ಶ್ರೀ ಕೆ. ಪಿ. ರೆಡ್ಡಿಯವರ ಡಿವಿಲಾಲರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದು ತಿಳಿ ಬಂದಿದೆ

ಅಲಹಾಬಾದ್ ಫೆ 10 — ಅಳ್ವಾರ್‌ನಲ್ಲಿ ಈಚೆಗೆ ದಸ್ತಗಿರಿ ಮಾಡಲ್ಪಟ್ಟ ಪ್ರಜಾ ಮಂಡಲ ಕಾರ್ಯಕರ್ತರು ಏನೊಂದು ಸುರಕ್ತಿಲ್ಲದೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಕೊಟ್ಟಿಕಲ್ ಫೆ 11— ಮಾನವ ಸೌಖ್ಯವೇ ಅಯರ್ವೇದದ ಗುರಿಯಾಗಿದೆ ಎಂದು ಡಾ॥ ಲಕ್ಷ್ಮೀಪತಿಯವರು ಮಾಡಿದ ಭಾಷಣದಲ್ಲಿ ತಿಳಿಸಿದರು.

ಕಲ್ಲೀಕೋಟೆ, ಫೆ 9 — ಡಾ॥ ಲಕ್ಷ್ಮೀಪತಿ ಮೊಡಿದ ಭಾಷಣದಲ್ಲಿ ಪಾಕಿಸ್ತಾನವು ಇಸ್ಲಾಂ ಅನುಕೂಲಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು.

ಕೈರೋ, ಫೆ 10 — ಈಜಿಪ್ಟಿನಲ್ಲಿ ವಿದ್ಯಾರ್ಥಿಗಳು ಬ್ರಿಟಿಷರ ವಿರುದ್ಧ ಬಳುವಳಿ ಎಬ್ಬಿಸಿ ನೈಂವಣಿಗೆ ನಡೆಸಿದಾಗ ಪೋಲಿಸರು ಗುಂಡು ಹಾರಿಸಿದರು.

ನವದೆಹಲಿ, ಫೆ 11 — ಭಾರತದ ಆಹಾರಾಭಾವ ವಿಷಯದಲ್ಲಿ ವೈಸ್ರಾಯರು ಭಾರತ ಮುಖಂಡರೊಡನೆ ಮಾತುಕತೆ ನಡೆಸುವರು. ಗಾಂಧೀಜೀ ಮತ್ತು ಜಿನಾರವರು ಸಲಹೆ ಕೇಳಿರುವರು.

## ನಗರ ವಾರ್ತೆ

ಮೈಸೂರು ಫೆ 13 ಮುಂಬರಲಿರುವ ಶಾಲಾ ಪರೀಕ್ಷೆಗಳಲ್ಲಿ ಕೂಡುವ ವಿದ್ಯಾರ್ಥಿಗಳ ಉಪಹಾರ ನಿಧಿಗಾಗಿ ನಿನ್ನೇರಾತ್ರಿ ಟೌನ್ ಹಾಲಿನಲ್ಲಿ ಶ್ರೀ ರಾಮಚಂದ್ರರಾವ್ ಭೊಂಭೊರೆಯವರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿಯೊಂದು ನಡೆಯಿತು. ನಿಧಿಗೆ ಸುಮಾರು ಸಾವಿರ ರೂ ಶೇಖರವಾಯಿತೆಂದು ತಿಳಿದು ಬಂದಿತ್ತೆ.

ಮೈಸೂರಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಮೈಸೂರು ಪೌರಸಭಾ ಕಾಂಗ್ರೆಸ್ ಪಕ್ಷದವರು ಕೋರಿಕೆಯಂತೆ ಇದೇ ತಾ॥ 20 ರಲ್ಲಿ ಪೌರಸಭೆಯ ವಿಶೇಷಾಧಿವೇಶನವನ್ನು ಕರೆದಿರುವರು.

ನಿವೃತ್ತ ಅರಮನೆ ಧರ್ಮಾಧಿಕಾರಿಗಳಾದ ಶ್ರೀ ಕೃಷ್ಣಶಾಸ್ತ್ರಿಗಳು ಈ ಬಿಳಿಗ್ಗೆ ತಮ್ಮ ಸ್ವಗೃಹದಲ್ಲಿ ಸೂರನೆ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಯಬಂದಿದೆ — ಮೈಸೂರು, ಫೆ 13

### ಕಂದಾಯ ವಸೂಲಿ

ಪುದುಕೋಟೆ, ಫೆ 9 — ಮಳೆಯಾಗದೆ ಬೆಳೆಯಾಗದೆ ಇರುವ 63 ಹಳ್ಳಿಗಳಲ್ಲಿ ಕಂದಾಯ ವಸೂಲಿ ಮಾಡಲಾಗಿದೆ. ಗೋಧಿಯನ್ನು ಸರ್ಕಾರದ ಅನುಮತಿಯಿಲ್ಲದೆ ಹೊರಕ್ಕೆ ರಫ್ತು ಮಾಡಬಾರದೆಂದು ಹುಕುಂ ಮಾಡಲಾಗಿದೆ.


ಹರ್ಷ ಬಿಟ್ಟದಪ್ಪುದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
**ರಾವಂದೂರ್ ವೀರಶೆಟ್ಟಿ & ಸನ್ಸ್**
ಶಿವರಾಂಪೇಟೆ ಮೈಸೂರು.

**At Opera —**
**From 7–2–46**
**ಪರಂಜ್ಯೋತಿ**
ಶ
(ತಮಿಳು ಚಿತ್ರ)
ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಕ್ಷಿರಾಜರಾರು
ಪ್ರತಿದಿನ ಮೂರು ಆಟಗಳು

**At Ranjit**
**ANDHERA**
**ತಾ|| 8—2—46 ರಿಂದ**
**ಸಿತಾರ, ಅರೂಣಾ, ಕೆ. ಸಿ. ಡೇ**
ಪಾತ್ರವಹಿಸಿರುವ
**ಅಂಧೇರಾ**
ಪ್ರತಿ ದಿನ 3 ಆಟಗಳು

ಪಾರ್ಲಿಮೆಂಟರಿ ಪ್ರತಿನಿಧ್ಯದ ನಿಕಲ್ಸನ್ ಬಾಂಬೆ ಪತ್ರಿಕೋದ್ಯಮಿಗಳೊಡನೆ

**ನಂಜನಗೂಡಿನಲ್ಲಿ ಮಹಾರುದ್ರಹೋಮ**
ತಾ || 10–2–46 ರಿಂದ 22–2–46 ರವರೆಗೆ 11 ದಿನಗಳು
ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದ ಎದುರು ಮಂಟಪದಲ್ಲಿ ನಡೆಯುವುದು. ಕಾರ್ಯಕ್ರಮ:—ಪ್ರತಿ ನಿತ್ಯವೂ ಪ್ರಾತಃಕಾಲ 8|| ಘಂಟೆಯಿಂದ ರುದ್ರಾರ್ಚನ ಪುರಸ್ಸರ ಮಹಾರುದ್ರಹೋಮ ಪೂರ್ಣಾಹುತಿ ಮತ್ತು ಪ್ರತ್ಯೇಕ ನವಗ್ರಹ ಹೋಮ. ಅಸ್ತಿಕ ಮಹನೀಯರು ದಯಮಾಡಿಸಿ ದರ್ಶನ ಲಾಭ ಹೊಂದಿ ಈಶ್ವರಾನುಗ್ರಹಕ್ಕೆ ಪಾತ್ರರಾಗಲು ಇದೊಂದು ಸುಸಮಯ. ದೇಶಕ್ಷೇಮವನ್ನೇ ಮುಖ್ಯ ಧ್ಯೇಯವಾಗಿಟ್ಟು ಪ್ರಾರಂಭಿಸಿರುವ ಈ ಮಹತ್ಕಾರ್ಯವು ಶ್ರೀಮಂತರ ಉದಾರ ಸಹಾಯದಿಂದಲೇ ಯಶಸ್ವಿಯಾಗಿ ನಡೆಯಬೇಕಾಗಿದೆ.
ಬಿ. ವಿ. ಪಂಡಿತರು,
ಮಹಾರುದ್ರಹೋಮ ಸಮಿತಿ
ಪ್ರೆಸಿಡೆಂಟ್ ನಂಜನಗೂಡು

**ಸುಖ ಆರೋಗ್ಯ ಆನಂದದಾಯಕ**
**ಜೀವಿತಕ್ಕೆ**

**ಸ್ಟೀಮರ್ ಮಾರ್ಕಿನ ಉತ್ಕೃಷ್ಟ**
**ಹಿಂಗಿನ ಪುಡಿ ಉಪಯೋಗಿಸಿ.**
ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.
ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.
ನಮ್ಮ ಶ್ರೀ ಓಂ ಗುರುತಿನ ಕೇಸರಿ, ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —
**ವಲ್ಲಭದಾಸ್ ತೇಜ್‌ಪಾಲ್,**
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

**ರಕ್ತವರ್ಧಕ – ಧಾತುಪುಷ್ಟಿಗೆ**
**ಸಂಜೀವನ**
**ಶಕ್ತಿವರ್ಧಕ**
ಬೆಲೆ ಡಬ್ಬಿಗೆ ರೂ.
— ———
ವಿಲಾಸ— ಶಕ್ತಿವರ್ಧಕ, ಗಂಟಿ ಜಾವುರಾಶೆರ್ಬತ್



Edited, Printed and published by M. S. Krishna Rao at the Satyavadi Press, Chamaraja Agrahar, Mysore
Lakshmi Press
Srirampet MYSORE